



ರ್‍ಯಾಪಿಡ್ ನಗರದಲ್ಲಿ ಲೇಖಕರು




ಸುಮಾರು 1278.45 ಎಕರೆಗಳ ಪ್ರದೇಶದಲ್ಲಿ ಈ ರಾಷ್ಟ್ರೀಯ ಸ್ಮಾರಕ ಹರಡಿಕೊಂಡಿದೆ. ವಿಶಾಲವಾದ ವಾಹನ ನಿಲುಗಡೆಯನ್ನು ದಾಟಿ, ಮೆಟ್ಟಿಲುಗಳನ್ನೇರಿದರೆ, ಆಕರ್ಷಕವಾದ ಪ್ರವೇಶದ್ವಾರವನ್ನು ತಲುಪುತ್ತೇವೆ. ದ್ವಾರದ ಎಡಭಾಗದಲ್ಲಿ ಶಿಲ್ಪಿ ಗುಟ್ ಜೋನ್ ಬೋರ್ ಗ್ಲಮ್‌ರ ಎದೆಮಟ್ಟದ ಲೋಹದ ಪ್ರತಿಮೆ ಇದೆ. ಹಾರಾಡುತ್ತಿದ್ದ ಬಣ್ಣ ಬಣ್ಣದ ಬಾವುಟಗಳ ನಡುವೆ ನಡೆದು, ಮತ್ತಷ್ಟು ಮೆಟ್ಟಿಲುಗಳನ್ನೇರಿದರೆ ಎದುರಿಗೆ ಕಾಣುವುದು, 60 ಅಡಿ ಎತ್ತರದ ಭವ್ಯವಾದ ಶಿಲ್ಪದ ಮುಖಗಳು. ಶಿಲ್ಪ ಕಲೆಯ ಅತ್ಯದ್ಭುತ, ಅನುಪಮ ನಿರ್ಮಾಣ! ಕಡಿದಾದ ಬೆಟ್ಟಗಳಲ್ಲಿ ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸಿ, ಅವಿರತ ವಾಗಿ ದುಡಿದು, ನಿರ್ಮಿಸಿದ ಗುಟ್ ಜೋನ್ ಮತ್ತವರ ಸಂಗಡಿಗರ ಈ ಶಿಲ್ಪಕಲಾಕೃತಿ ಅಪ್ರತಿಮ, ಅನನ್ಯ! ಈ ಸ್ಮಾರಕ ವಿದೇಶಿ ವಸಾಹತುದಾರರಿಂದ ಬಿಡುಗಡೆಯಾದ ಅಮೆರಿಕಾ ದೇಶದ ಮೊದಲ 130 ವರ್ಷಗಳ ಇತಿಹಾಸವನ್ನು ಪ್ರತಿನಿಧಿಸುವ ಹೆಮ್ಮೆಯ, ಪ್ರತಿಷ್ಠೆಯ ಸಂಕೇತ.

ಪ್ರವಾಸಿಗರು ನಿಲ್ಲುವ ಬೆಟ್ಟದಿಂದ ಶಿಲ್ಪವಿರುವ ಬೆಟ್ಟಗಳ ನಡುವೆ ಇರುವ ಕಂದಕವನ್ನು ದಾಟಲು, ವೃತ್ತಾಕಾರದ ಸೇತುವೆಯಿದೆ. ಸೇತುವೆಯ ಮೂಲಕವೂ ನಡುವಿನ ಕಂದಕವನ್ನು ದಾಟಿ, ಮುಖಗಳ ಕೆಳ ಭಾಗವನ್ನು ತಲುಪಬಹುದು.

ಇರುಳಿನಲ್ಲಿ ಬೆಳಕಿನ ಪ್ರದರ್ಶನವಿರುತ್ತದೆ. ಬೆಳಕಿನಲ್ಲಿ ಮುಖಗಳ ವಿವರಗಳು ಸ್ಪಷ್ಟವಾಗಿ ಕಾಣುತ್ತವೆ. ಇಲ್ಲಿನ ಚಿಕ್ಕ ಥಿಯೇಟರ್‌ನಲ್ಲಿ, ಮೌಂಟ್ ರಷ್‌ಮೋರ್ ರಾಷ್ಟ್ರೀಯ ಸ್ಮಾರಕ ನಿರ್ಮಾಣವಾದ ಬಗೆಗಿನ ಸಾಕ್ಷ್ಯಚಿತ್ರದ ಪ್ರದರ್ಶನವಿರುತ್ತದೆ. ಮಾರಾಟ ಮಳಿಗೆಗಳಲ್ಲಿ ಬಗೆ ಬಗೆ ಸ್ಮರಣಿಕೆಗಳು ಕೂಡ ಲಭ್ಯ.

‘ನಾರ್ತ್ ಬೈ ನಾರ್ತ್ ವೆಸ್ಟ್’ ಎಂಬ 50ರ ದಶಕದ ಆಂಗ್ಲ ಚಲನ ಚಿತ್ರದ ಒಂದೆರಡು ದೃಶ್ಯಗಳನ್ನು ಇಲ್ಲಿ ಚಿತ್ರೀಕರಿಸಿದ್ದಾರೆ. ನಂತರದ ದಿನಗಳಲ್ಲಿ, ಸ್ಮಾರಕದ ಸಂರಕ್ಷಣೆಯ ಹಿತ ದೃಷ್ಟಿಯಿಂದ ಇಲ್ಲಿ ಚಿತ್ರೀಕರಣವನ್ನು ನಿಷೇಧಿಸಲಾಯಿತು. ವರ್ಷವೊಂದರಲ್ಲಿ ಈ ಸ್ಮಾರಕಕ್ಕೆ ಭೇಟಿ ನೀಡಿದ ಪ್ರವಾಸಿಗರ ಸಂಖ್ಯೆ 3 ಲಕ್ಷವನ್ನೂ ಮೀರಿತ್ತಂತೆ.